


ದೇವ ಗುಡ್ಡಗಳು

ಆಸ್ಟ್ರೇಲಿಯಾ ಎಂಬ ಪದವನ್ನು ಕೇಳಿದ ಕೂಡಲೇ ನಮ್ಮ ಮನಸ್ಸಿನಲ್ಲಿ ಹಾದು ಹೋಗುವ ಪದಗಳೆಂದರೆ – ಚಿಗರೆಗಳಂತೆ ಹಿಂಡುಹಿಂಡಾಗಿ ಕಾಣಿಸುವ ಕಾಂಗರೂಗಳು, ಸಿಡ್ನಿಯ ಕಮಲದಳಗಳ ಆಕಾರದ ಅಪೇರಾ ಹೌಸ್ ಹಾಗೂ ವಿಶ್ವ ಚಾಂಪಿಯನ್ ಆಗಿ ಮೆರೆದ ಕ್ರಿಕೆಟ್ ಟೀಮ್. ಇವುಗಳ ಜೊತೆಗೆ ಟೆಸ್ಟ್ ಕ್ರಿಕೆಟ್ ನಡೆಯುವ ನಗರಗಳಾದ ಸಿಡ್ನಿ, ಮೆಲ್ಬೋರ್ನ್, ಅಡಿಲೇಡ್, ಪರ್ತ್‌ಗಳೂ ನೆನಪಾಗುತ್ತವೆ. ಕಳೆದ ವರ್ಷ ಭಾರತೀಯ ವಿದ್ಯಾರ್ಥಿಗಳ ಮೇಲೆ ಆಸ್ಟ್ರೇಲಿಯಾದ ಕೆಲವು ಕಿಡಿಗೇಡಿಗಳು ನಡೆಸಿದ ಹಲ್ಲೆ ಕೂಡ ಸಹಜವಾಗಿ ನೆನಪಾಗುತ್ತದೆ.

ಯೂರೋಪ್‌ಗಿಂತ ಎರಡು ಪಟ್ಟು ಹಾಗೂ ಭಾರತಕ್ಕಿಂತ ಎರಡೂವರೆಯಷ್ಟು ದೊಡ್ಡದಾದ ಈ ದ್ವೀಪ ಖಂಡದಲ್ಲಿ ಬಿಳಿಯರದೇ ಕಾರುಬಾರು. ಜಗತ್ತಿನ ಅತ್ಯಂತ ವಿರಳ ಜನಸಂಖ್ಯೆಯುಳ್ಳ ಈ ದೇಶದ ಬಹುಪಾಲು ಭಾಗವಾದ ಅರಣ್ಯದಲ್ಲಿ ಕಾಂಗರೂಗಳದ್ದೇ ದರ್ಬಾರು.



ಇತ್ತೀಚಿನವರೆಗೆ, ಹೊರಗಿನವರನ್ನು ಆಹ್ವಾನಿಸಲು ಹಿಂಜರಿಯುತ್ತಿದ್ದ ಆಸ್ಟ್ರೇಲಿಯನ್ನರು, ಈಗ ಮುಕ್ತವಾಗಿ ಪ್ರವಾಸಿಗರನ್ನು ಸೆಳೆಯುತ್ತಿದ್ದಾರೆ. ಆಸ್ಟ್ರೇಲಿಯಾಗೆ ಹೋಗುವ ಭಾರತೀಯ ಪ್ರವಾಸಿಗಳೂ ಹೆಚ್ಚುತ್ತಿದ್ದಾರೆ. ಕಡಿಮೆಜನ, ಅಧಿಕ ಪ್ರಾಕೃತಿಕ ಸಂಪತ್ತಿನಿಂದ ಸಮೃದ್ಧವಾಗಿ, ಕೃಷಿಯೊಂದಿಗೆ, ಉದ್ಯಮಗಳನ್ನೂ ಸ್ಥಾಪಿಸಿ, ಪ್ರಗತಿಯತ್ತ ಹೆಜ್ಜೆ ಹಾಕುತ್ತಿರುವ ಆಸ್ಟ್ರೇಲಿಯಾ – ಸಕ್ಕರೆ, ಮಾಂಸ, ಹಾಲಿನ ಉತ್ಪನ್ನಗಳು, ಮೆರಿನ್ ಉಲ್ಲನ್ ಹಾಗೂ ಖನಿಜಗಳನ್ನು ರಫ್ತು ಮಾಡುತ್ತಿದೆ. 1300 ಮೈಲುಗಳಿಗೂ ಹೆಚ್ಚಿನುದ್ದದ ಹವಳದ ದಿಬ್ಬ (ದಿ ಗ್ರೇಟ್ ಬ್ಯಾರಿಯರ್ ರೀಫ್), ಹತ್ತಾರು ನೈಸರ್ಗಿಕ ಬೀಚ್‌ಗಳು, ಎಸೆದವನ ಬಳಿಗೇ ಮರಳಿ ಬರುವ ಬೂಮರಾಂಗ್ ಅನ್ನು ಸೃಜಿಸಿದ ಆದಿವಾಸಿಗಳು, ಗಗನ ಚುಂಬಿ ಕಟ್ಟಡಗಳ ಸುಂದರ ಪಟ್ಟಣಗಳನ್ನು ಬಳಸಿಕೊಂಡು, ಮನರಂಜನಾ ಕೇಂದ್ರಗಳನ್ನು ಸ್ಥಾಪಿಸಿ, ಅಪರೂಪದ ಪ್ರಾಣಿಸಂಕುಲವನ್ನು ಶೋಕೇಸ್ ಮಾಡಿ ಲಕ್ಷಗಟ್ಟಲೆ ಪ್ರವಾಸಿಗಳನ್ನು ಸೂಜಿಗಲ್ಲಿನಂತೆ ಈ ದೇಶ ಸೆಳೆಯುತ್ತಿದೆ – 'ತುಂಬಾ ಸುಂದರವಾದ ದೇಶ, ನೋಡಬನ್ನಿ' ಎಂಬ ಶಿಫಾರಸಿನೊಡನೆ,

ಹದಿಮೂರು ದಿನಗಳ ನಮ್ಮ ಆಸ್ಟ್ರೇಲಿಯಾ ಪ್ರವಾಸದ ಮೊದಲ ಹೆಜ್ಜೆ ಇಟ್ಟಿದ್ದು ಮೆಲ್ಬರ್ನ್‌ನಲ್ಲಿ. ಬೆಂಗಳೂರಿನಿಂದ ಹೊರಟು, ಥಾಯ್ಲೆಂಡ್‌ನ ಬ್ಯಾಂಕಾಕ್ ಮುಖಾಂತರ ಆಸ್ಟ್ರೇಲಿಯಾದ ಮೊದಲ ರಾಜಧಾನಿ ಮೆಲ್ಬರ್ನ್ ಅನ್ನು ತಲುಪಿದೆವು.

ಅಕ್ಟೋಬರ್ –ನವೆಂಬರ್ ತಿಂಗಳು ಆಸ್ಟ್ರೇಲಿಯಾದ ಈ ಭಾಗದಲ್ಲಿ ವಸಂತ ಋತುವಿನ ವೈಭವ. ತಾಪಮಾನ 13ರಿಂದ 20 ಡಿಗ್ರಿ ಸೆಲ್ಸಿಯಸ್. ಸ್ವಲ್ಪ ಚಳಿ. ಎಲ್ಲೆಡೆ ಹಸಿರು. ಆಗೀಗ ಕೆಲವೇ ನಿಮಿಷಗಳ ಕಾಲ ಹನಿದು ಹೋಗುವ ಮಳೆ. ಉಳಿದೆಲ್ಲಾ ಸಮಯದಲ್ಲಿ ಹಿತಕರವಾದ ಬಿಸಿಲು. ಸಮುದ್ರ ದಂಡೆ. ಬಣ್ಣ ಬಣ್ಣದ ಉಡುಪು ತೊಟ್ಟು ಸಂಭ್ರಮಿಸುತ್ತಿದ್ದ ಪ್ರವಾಸಿಗಳು, ಸ್ಥಳೀಯರು ನಮ್ಮ ಕಣ್ಮನಗಳನ್ನು ತುಂಬಿದರು. ಮೆಲ್ಬರ್ನ್ ನಗರ ಪ್ರದಕ್ಷಿಣೆಯ ಮೂಲಕವೇ ನಮ್ಮ ಪ್ರವಾಸದ ರಸಕ್ಷಣಗಳು ಆರಂಭವಾದವು.

## ಕ್ಯಾಪ್ಟನ್ ಕುಕ್‌ನ ಕುಟೀರ

ಅಸ್ಟ್ರೇಲಿಯಾದ ಮೊದಲ ರಾಜಧಾನಿಯಾಗಿದ್ದ ಈ ನಗರದ ಪ್ರದಕ್ಷಿಣೆಯಲ್ಲಿ ನಾವು ಮೊದಲು ಕಂಡದ್ದು ಕ್ಯಾಪ್ಟನ್ ಕುಕ್‌ನ ಕುಟೀರ. ಅವನೇ ಈ ದೇಶವನ್ನು ಜಗತ್ತಿಗೆ ಪರಿಚಯಿಸಿದವನು ಹಾಗೂ ಇಲ್ಲಿಗೆ ಬ್ರಿಟಿಷ್ ವಸಾಹತು ಬರಲು ಕಾರಣನಾದ ನಾವಿಕ.

1955ರಲ್ಲಿ ಬ್ರಿಟನ್ನಿನ ಉತ್ತರ ಯಾರ್ಕ್‌ಷೈರ್‌ನ ಹಳ್ಳಿಯೊಂದರಲ್ಲಿ ಕುಕ್‌ನ ತಂದೆ ತಾಯಿಯರು ಕಟ್ಟಿದ ಕುಟೀರವಿದು. 1933ರಲ್ಲಿ ಈ ಕುಟೀರ ಮಾರಾಟಕ್ಕಿದೆ ಎಂದು ತಿಳಿದ ಸರ್ ರಸೆಲ್ ಗ್ರೀಮ್ವೇಡ್ ಎನ್ನುವವರು ಅದನ್ನು ಕೊಂಡುಕೊಂಡರು. ಮೆಲ್ಬರ್ನ್‌ನಲ್ಲಿ ಯೂರೋಪಿಯನ್ ವಾಸ್ತವ್ಯದ